ಸಿ. ಸಿ. ನಂ.- **870/22**

ಪಿ.ಡಬ್ಲ್ಯೂ.-1

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ **29-10-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು- ಆರೋಪಿ ಪರ ವಕೀಲರಾದ ಶ್ರೀ ಬಿ ಎಸ್ ರವರಿಂದ

ನಾನು ಫಿರ್ಯಾದಿ ಬ್ಯಾಂಕಿನಲ್ಲಿ ಎಸ್.ಡಿ.ಎ ಆಗಿ ಕೆಲಸ ಮಾಡುತ್ತೇನೆ. ಆರೋಪಿ ನಮ್ಮ ಬ್ಯಾಂಕಿನಲ್ಲಿ ಲೋನ್ ಮಾಡಿದ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಆರೊಪಿಗೆ ರೂ.2,00,000 ನಿ-ಸಾಲವನ್ನು ನಮ್ಮ ಬ್ಯಾಂಕಿನವರು ಮಂಜೂರು ಮಾಡಿರುತ್ತಾರೆ. ಹೀಗೆ 2020 ನೇ ಇಸವಿಯಲ್ಲಿ ಸಾಲ ಮಂಜೂರು ಮಾಡಲಾಗಿತ್ತು ಆದರೆ ನನಗೆ ದಿನಾಂಕ ನೆನಪಿಲ್ಲ. ಇದು ಜಾಮೀನು ಆಧಾರದ ಮೇಲೆ ನೀಡದ ಸಾಲ ಆಗಿರುತ್ತದೆ. ಆರೋಪಿಯ ಸಾಲದ ಖಾತಾ ವಿವರವನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತತೇನೆ ಸದರಿಯಲ್ಲಿ ಸಾಲ ಮಂಜೂರು ಮಾಡಿದ ದಿನದಿಂದ ಆಗಿರುವ ವ್ಯವಹಾರಗಳ ಬಗ್ಗೆ ನಮೂದು ಇರುತ್ತದೆ. ಆರೋಪಿ ಸಾಲದ ಎಡೆಗೆ ಮಾಡಿರುವ ಮರುಪಾವತಿಯ ಬಗ್ಗೆ ಈ ಖಾತಾ ವಿವರದಲ್ಲಿ ನಮೂದು ಇರುತ್ತದೆ. ಆರೋಪಿ ಈಗಾಗಲೇ ರೂ.2,00,000/- ಲಕ್ಷ ಮೊತ್ತವನ್ನು ಮರುಪವಾತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಆರೋಪಿಗೆ ನೀಡಿದ ಸಾಲದ ಮೇಲೆ ಬಡ್ಡಿ ಚಕ್ರ ಬಡ್ಡಿಯನ್ನು ಹೆಚ್ಚಾಗಿ ಹಾಕಿರುತ್ತೇವೆ ಎಂದರೆ ಸರಿಯಲ್ಲ , ಸಾಕಿಃ್ಷ ಅದು ಕಂಪ್ಯೂಟರ್ ಜನರೇಟಡ್ ಆಗಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕಃ 14.7.2022 ರಂದು ವಕೀಲರು ಮುಖಾಂತರ ಆರೋಪಿಗೆ ನೊಟೀಸು ಕಳುಹಿಸಿರುತ್ತೇವೆ. ಅದಕ್ಕೂ ಮುನ್ನ ಬ್ಯಾಂಕಿನಿಂದ ಆರೋಪಿಗೆ ನೊಟೀಸ್ ಕಳುಹಿಸಿದ್ದೇವೆ ಅದರ ದಿನಾಂಕ ನನಗೆ ನೆನಪಿಲ್ಲ. ಈ ರೀತಿ ಕಳುಹಿಸಿದ ನೊಟೀಸುಗಳು ಆರೋಪಿಗೆ ತಲುಪಿದೆಯೇ ಎಂದರೆ ಸಾಕ್ಷಿ ವಕೀಲರ ಮುಖಾಂತರ ನೀಡಿದ ನೊಟೀಸನ್ನು ಆರೋಪಿಯು ತಿರಸ್ಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನೊಟೀಸುಗಳು ಆರೋಪಿಗೆ ಜಾರಿಯಾಗಿಲ್ಲ ಹಾಗೂ ಅವರು ಯಾವುದೇ ನೊಟೀಸಬನ್ನು ತಿರಸ್ಕರಿಸಿಲ್ಲ ಎಂದರೆ ಸರಿಯಲ್ಲ. ಈ ರೀತಿ ಕಳುಹಿಸಿದ ಲಾಯರ್ ನೊಟೀಸ್ ವಾಪಸ್ಸು ಬಂದಿರುತ್ತದೆ ಹಾಗೂ ಬ್ಯಾಂಕಿನ ಮುಖಾಂತರ ಕಳುಹಿಸಿದ ನೊಟೀಸನ್ನು ಆರೋಪಿ ಪಡೆದಿರುತ್ತಾರೆ. ನಾವು ತಪ್ಪಾಗಿ ವಿಳಾಸ ನಮೂದಿಸಿ ಆರೋಪಿಗೆ ನೊಟೀಸ್ ಕಳಿಸಿದ್ದರಿಂದ

ಅದು ಅವರಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಬ್ಯಾಂಕಿನ ಮುಖಾಂತರ ಕಳುಹಿಸಿದ ನೊಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಬ್ಯಾಂಕಿನ ಮುಖಾಂತರ ನೋಟೀಸ್ ಕಳುಹಿಸಲಾಗಿತ್ತು ಎಂದು ಲಾಯರ್ ಮುಖಾಂತರ ಕಳಿಸಿದ ನೊಟೀಸ್‌ನಲ್ಲಿ ನಮೂದು ಮಾಡಿಲ್ಲ. ನಾನು ಕಾನೂನು ರೀತಿಯಾಗಿ ಆರೋಪಿ ವಿರುದ್ಧ ಫಿರ್ಯಾದನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಮರುಪಾವತಿ ಮಾಡಿದ ಸಂಪೂರ್ಣ ಮೊತ್ತದ ಬಗ್ಗೆ ಖಾತಾ ವಿವರದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಮಂಜೂರು ಮಾಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.